ಮಾಡಿದ್ದು ಸರಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಅಂತಹ ಭ್ರಷ್ಟ ವೈದ್ಯಾಧಿಕಾರಿ ಮತ್ತು ಅಧಿಕಾರಿಗಳ ಬಗ್ಗೆ ಇದುವರೆಗೂ ಕ್ರಮ ಕೈಗೊಳ್ಳದೆ ಇರಲು ಕಾರಣವೇನು ? ಈ ಬಗ್ಗೆ ಸರಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು). —ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲ್ಲೂಕು ಕ್ಯಾಡಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅವ್ಯವಹಾರ ನಡೆದಿರುವ ವಿಚಾರ ದಿನಾಂಕ ೧೯-೯-೬೭ ರಂದು ಸರ್ಕಾರದ ಗಮನಕ್ಕೆ ಬಂದಿದೆ. ಅವ್ಯವಹಾರದ ಬಗ್ಗೆ ದೂರು ಬಂದ ನಂತರ, ಉತ್ತರ ಕನ್ನಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ತಮ್ಮ ಆಫೀಸಿನ ಆಡಿಟ್ ಪಾರ್ಟಿಯನ್ನು ದಿನಾಂಕ ೨೪-೮-೬೭ ರಂದು ಅಲ್ಲಿಗೆ ಆಡಿಟ್ ಮಾಡಲು ಕಳಿಸಿರುತ್ತಾರೆ. ಸಂಬಂಧಪಟ್ಟ ಪ್ರಥಮ ದರ್ಜೆ ಸಹಾಯಕ ಗೈರು ಹಾಜರಿದ್ದ ಪ್ರಯುಕ್ತ ವೈದ್ಯಾಧಿಕಾರಿಯವರು ಹಣದ ತಿಜೋರಿ (ಕ್ಯಾಷ್‌ಚೆಸ್ಟ್) ಮತ್ತು ಅಲಮೇರಾವನ್ನು ಪಂಚನಾಮೆ ಮಾಡಿ ತೆರೆದು ಎಲ್ಲಾ ದಾಖಲೆ ಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ವರದಿ ಆಗಿರುತ್ತದೆ. ಆಡಿಟ್ ವರದಿಗಾರರು ದಾಖಲೆಗಳನ್ನು ಪರಿಶೀಲಿಸಿದಾಗ, ದಿನಾಂಕ ೧೭-೭-೬೭ ರಿಂದ ನಗದು ಪುಸ್ತಕವನ್ನು ಬರೆಯದೆ ಇರುವುದೂ, ೧೯೬೭ನೇ ಮೇ ತಿಂಗಳಲ್ಲಿ ದಸರಾ ಹಬ್ಬಕ್ಕೆ ಮುಂಗಡ ತೆಗೆದುಕೊಂಡಿರುವುದು ಮುಂತಾದ ಅವ್ಯವಹಾರಗಳು ಕಂಡು ಬಂದಿರುವುದಾಗಿ ವರದಿ ಆಗಿರುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಮತ್ತೊಂದು ಅಲಮೇರಾವನ್ನು ತೆಗೆದಿಲ್ಲವಾದ್ದರಿಂದ ಎಲ್ಲಾ ದಾಖಲೆಗಳು ದೊರೆಯದೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ ಆಡಿಟ್ ಸಿಬ್ಬಂದಿಯವರು ತಮ್ಮ ವರದಿಯನ್ನು ಪೂರ್ಣವಾಗಿ ಸಲ್ಲಿಸಿದ್ದ ಕಾರಣ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ವಿಭಾಗೀಯ ಜಂಟೀ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಳಗಾವಿ ಇವರಿಗೆ ದಿನಾಂಕ ೨೪-೮-೬೭ ರಂದು ಪತ್ರ ಬರೆದು ವಿಭಾಗೀಯ ಮಟ್ಟದ ಕಚೇರಿಯಿಂದ ಆಡಿಟ್ ಸಿಬ್ಬಂದಿಯನ್ನು ಕಳಿಸಿ ಉಳಿದ ಅಲಮೇರಾವನ್ನು ತೆರೆದು ವಿವರವಾಗಿ ಆಡಿಟ್ ಮಾಡುವಂತೆ ಕೋರಿರುತ್ತಾರೆ. ಹಾಗೂ ದಾಖಲೆ ಪತ್ರಗಳನ್ನು ಹೆಚ್ಚುಕಡಿಮೆ ಮಾಡದಂತೆ ನೋಡಿಕೊಳ್ಳಲು ಸಂಬಂಧಪಟ್ಟ ವೈದ್ಯರು ಮತ್ತು ಪ್ರಥಮ ದರ್ಜೆ ಸಹಾಯಕರನ್ನು ವರ್ಗ ಮಾಡಬೇಕೆಂದು ಕೋರಿರುವುದಾಗಿ ವರದಿ ಆಗಿರುತ್ತದೆ. ಈ ಪ್ರಕರಣವು ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ಅವ್ಯವಹಾರಗಳಿಗೆ ಕಾರಣರಾದವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಶ್ರೀ ಕೆ.ಬಿ. ಕೋಳಿವಾಡರ ವಿಷಯವನ್ನು ಮುಂದಕ್ಕೆ ಹಾಕಲಾಗಿದೆ.

೧೩) ಉಡುಪಿ ತಾಲ್ಲೂಕಿನ ಕಾಪು ಕ್ಷೇತ್ರದ ಕಳತೂರು ಗ್ರಾಮದ ಶ್ರೀಮತಿ ಹೊನ್ನಮ್ಮ ನಾಯ್ಕ ಇವರ ಭೂಮಿಯನ್ನು ಖಾಸಗೀ ಸಂಸ್ಥೆಗೆ ವರ್ಗಾವಣೆ ಮಾಡಿರುವುದು

ಶ್ರೀ ವಸಂತ ವಿ. ಸಾಲಿಯಾನ್.—ಮಾನ್ಯ ಸಭಾಧ್ಯಕ್ಷರೇ, ಉಡುಪಿ ತಾಲ್ಲೂಕಿನ ಕಾಪು ಕ್ಷೇತ್ರದ ಕಳತೂರು ಗ್ರಾಮದಲ್ಲಿ ಸುಮಾರು ೩೦ ವರ್ಷಗಳಿಂದ ಸರಕಾರಿ ಭೂಮಿಯಲ್ಲಿ ಸುಮಾರು ೧.೩೪ ಎಕರೆ ಜಮೀನಿನ ಹಕ್ಕುಪತ್ರವನ್ನು ಪಡೆದು ಕೃಷಿ, ಮನೆ, ಬಾವಿ ಮಾಡಿದ ಶ್ರೀಮತಿ ಹೊನ್ನಮ್ಮ ನಾಯ್ಕ ಇವರ ಭೂಮಿಯನ್ನು ಒಂದು ಖಾಸಗಿ ಸಂಸ್ಥೆಗೆ ೧೯೬೬ರಲ್ಲಿ ಮಂಜೂರು ಮಾಡಲಾಗಿದೆ. ಶ್ರೀಮತಿ ಹೊನ್ನಮ್ಮ ನಾಯ್ಕರವರಿಗೆ ೧೯೫೯ರಲ್ಲಿ ಹಕ್ಕುಪತ್ರ ದೊರಕಿದೆ. ಇತ್ತೀಚೆಗೆ ಸರಕಾರಿ ಅಧಿಕಾರಿಗಳು ೧೯೬೬ರಲ್ಲಿ ಅವರ ಭೂಮಿಯನ್ನು ಒಂದು ಖಾಸಗಿ ಸಂಸ್ಥೆಗೆ ವರ್ಗಾವಣೆ ಮಾಡಿದ್ದಾರೆ. ಈ ವಿಚಾರವನ್ನು ಸರಕಾರ ಕೂಡಲೇ ಪರಿಶೀಲಿಸಿ, ಆ ಭೂಮಿ (೧.೩೪ ಎಕರೆ)ಯನ್ನು ಹೊನ್ನಮ್ಮ ನಾಯ್ಕರಿಗೆ ಕೊಡಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ. —ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಮಂತ್ರಿಗಳು ಊರಿನಲ್ಲಿ ಇಲ್ಲದೇ ಇರುವ ಕಾರಣ ಅವರು ಬಂದ ತಕ್ಷಣ ಅವರಿಗೆ ತಿಳಿಸಿ ಉತ್ತರವನ್ನು ಕೊಡಿಸುತ್ತೇನೆ.

೧೪) ದಕ್ಷಿಣ ಕನ್ನಡ ಜಿಲ್ಲೆ ರೈತರಿಗೆ ಸದ್ಯ ಇರುವಂತಹ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸುವುದು.

ಶ್ರೀ ವಿನಯ್ ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಂಡ ಸಕಾಲದಲ್ಲಿ ಮಳೆ ಬಾರದೇ ಇರುವುದರಿಂದ ಮತ್ತು ಸಾಕಷ್ಟು ಮಳೆ ಬಾರದ ಕಾರಣ ರೈತರಿಗೆ ತಾವು